ಪ್ರಜಾವಾಣಿ

# 'ರಾಕೆಟ್ ಏರದೆಯೇ ಸಿಕ್ಕಿತು ಗಗನಯಾತ್ರೆ ಅನುಭವ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಗಗನಯಾತ್ರಿಗಳು ಬಾಹ್ಯಾಕಾಶ ಲೋಕದಲ್ಲಿ ಹೇಗೆಲ್ಲ ವಿಹರಿಸುತ್ತಾರೆ ಎನ್ನುವ ವಿಶಿಷ್ಟ ಅನುಭವ ಈಗ ನಮಗೆ ದಕ್ಕಿದೆ' ಎಂದು ಅಮೆರಿಕದಲ್ಲಿ ನಡೆದ ಬಾಹ್ಯಾಕಾಶ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ ನಗರದ ವಿದ್ಯಾರ್ಥಿಗಳು ಹೆಮ್ಮೆಯಿಂದ ಹೇಳಿದರು.

ಹನಿವೆಲ್ ಲೀಡರ್‌ಷಿಪ್ ಚಾಲೆಂಜ್ ಅಕಾಡೆಮಿ (ಎಚ್‌ಎಲ್‌ಸಿಎ) ಈ ಕಾರ್ಯಾಗಾರವನ್ನು ಆಯೋಜಿಸಿತ್ತು. ಅಮೆರಿಕದ ಅಲ್ಬಾಮಾ ಹಂಟ್ಸ್‌ವಿಲ್ಲೆನಲ್ಲಿರುವ ಯುಎಸ್ ಬಾಹ್ಯಾಕಾಶ ಮತ್ತು ರಾಕೆಟ್ ಕೇಂದ್ರದಲ್ಲಿ ಮಾರ್ಚ್ 3ರಿಂದ 10ರವರೆಗೆ ಕಾರ್ಯಾಗಾರ ನಡೆಯಿತು. ಇದರಲ್ಲಿ ಭಾಗವಹಿಸಿದ್ದ ದೇಶದ 17 ವಿದ್ಯಾರ್ಥಿಗಳಲ್ಲಿ ಏಳು ಮಂದಿ ನಗರದವರು.

ಜೈನ್ ಕಾಲೇಜಿನ ಅನುಷಾ ಜೈನ್, 'ರಾಕೆಟ್ ಪಕ್ಕದಲ್ಲಿ ನಿಂತಿದ್ದು, ರಾಕೆಟ್ ನಿರ್ಮಾಣದ ವಿವಿಧ ಹಂತಗಳನ್ನು ತಿಳಿದದ್ದು ಮತ್ತು ಗಗನಯಾತ್ರಿಗಳಂತೆ ಚಂದ್ರನ ಮೇಲೆ ನಡೆದದ್ದು ಜೀವನದ ಅದ್ಭುತ ಕ್ಷಣಗಳು. ಶೂನ್ಯ ಗುರುತ್ವಾಕರ್ಷಣೆ ಬಗ್ಗೆ ಪುಸ್ತಕದಲ್ಲಿ ಓದಿದ್ದೆವು. ಅದನ್ನು ಅನುಭವಿಸುವ ಕ್ಷಣ ನನಗೆ ದೊರಕ್ಕಿದ್ದು ಖುಷಿ ಇದೆ' ಎಂದರು.



ಬಾಹ್ಯಾಕಾಶ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ಧ ವಿದ್ಯಾರ್ಥಿಗಳು. (ಎಡದಿಂದ) ಅರ್ಜುನ್ ನಾಯರ್, ಅನುಷಾ ಜೈನ್, ನಿಮಲ್ ಕುರೇನ್, ವೈಷ್ಣವಿ ಕಲಂಬಕಮ್ ಕಂದವೇಲು ಮತ್ತು ನವೋಮಿ ವರ್ಗೀಸ್ -**ಪ್ರಜಾವಾಣಿ ಚಿತ್ರ**

ವೈಟ್ ಫೀಲ್ಡ್ ಗ್ಲೋಬಲ್ ಕಾಲೇಜಿನ ನಿಮಲ್ ಕುರೈನ್, 'ವಿಮಾನ ಚಾಲನೆ ಕುರಿತು ಪ್ರಾಯೋಗಿಕವಾಗಿ ತಿಳಿದುಕೊಳ್ಳುವುದು ಹೆಚ್ಚು ಆಸಕ್ತಿಕರವಾಗಿತ್ತು. ವಿಜ್ಞಾನಿಗಳು, ಎಂಜಿನಿಯರ್‌ಗಳು ಮತ್ತು ಗಗನಯಾತ್ರಿಗಳನ್ನು ಭೇಟಿ ಮಾಡುವ ಅವಕಾಶ ಇತ್ತು. ನನ್ನ ನೆಚ್ಚಿನ ವಿಜ್ಞಾನಿಯನ್ನು ಭೇಟಿಯಾಗಿದ್ದು, ಅವರೊಂದಿಗೆ ಚರ್ಚಿಸಿದ್ದು ಮರೆಯಲಾಗದ ಕ್ಷಣ' ಎಂದು ಹೇಳಿದರು.

ಶ್ರೀಕುಮಾರನ್ ಚಿಲ್ಡ್ರನ್ಸ್ ಹೋಮ್ ಕಾಲೇಜಿನ ಅರ್ಜುನ್ ನಾಯರ್, 'ಅಮೆರಿಕ, ಪೋಲೆಂಡ್ ದೇಶದವರು ನನ್ನ ಜತೆ ಕೊಠಡಿ ಹಂಚಿಕೊಂಡಿದ್ದರು. ಅವರೊಂದಿಗೆ ಬೆರೆಯುವುದು ಖುಷಿ ಕೊಟ್ಟಿತು. ನಾವು ಭಾರತೀಯರು ಮಾತನಾಡಲು ಹಿಂಜರಿಯುತ್ತೇವೆ. ಆದರೆ ಅವರು ಹಾಗಲ್ಲ, ಬಹುಬೇಗ ಸ್ನೇಹಿತರಾಗುತ್ತಾರೆ. ಬಾಹ್ಯಾಕಾಶದ ಕಲಿಕೆಯೊಂದಿಗೆ ನಾಲ್ಕು ದಿನದಲ್ಲಿ ಪರಿಚಿತರಾದ ವಿದೇಶಿ ಸ್ನೇಹಿತರೊಂದಿಗೆ ಹಾಡಿ, ಕುಣಿದದ್ದು ನೆನಪಿನಲ್ಲಿ ಉಳಿದಿದೆ' ಎಂದು ತಿಳಿಸಿದರು.

ಎಸ್.ಎಸ್.ಎಂ.ಆರ್.ವಿ ಪಿಯು ಕಾಲೇಜಿನ ವೈಷ್ಣವಿ ಕಲಂಬಕಮ್ ಕಂದವೇಲು, 'ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಎಸ್.ಟಿ.ಇ.ಎಂ) ವಿಷಯ ಆಧಾರಿತ ಪ್ರಾಯೋಗಿಕ ಕಲಿಕೆ ನಮಗೆ ಅಗತ್ಯವಿದೆ. ಇಲ್ಲಿ ನಮಗೆ ಕೇವಲ ಪುಸ್ತಕದಲ್ಲಿನ ಪಾಠ ಇರುತ್ತದೆ. ಯಾವುದೇ ಪ್ರಾಯೋಗಿಕ ಜ್ಞಾನ ಇರುವುದಿಲ್ಲ. ಎಲ್ಲವನ್ನೂ ತಿಳಿದಿರುತ್ತೇವೆ ಆದರೆ, ಯಾವೊಂದರ ಬಗ್ಗೆಯೂ ಆಳ ಜ್ಞಾನ ಇರುವುದಿಲ್ಲ' ಎಂದರು.

ಸಿ.ಎಂ.ಆರ್. ಪಿಯು ಕಾಲೇಜಿನ ನವೋಮಿ ವರ್ಗೀಸ್, 'ರಾಕೆಟ್ ವಿನ್ಯಾಸ, ನಿರ್ಮಾಣ ಮತ್ತು ಪರೀಕ್ಷೆ, ಗಗನಯಾನ ತರಬೇತಿ, ಚಂದ್ರಯಾನದ ಬಗೆಗಿನ ಕಾರ್ಯಾಗಾರಗಳ ಬಗ್ಗೆ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇನೆ' ಎಂದು ಹೇಳಿದರು.

ಎಚ್‌ಎಲ್‌ಸಿಎ ಕಾರ್ಯಕ್ರಮವು 16-18ರ ವಯಸ್ಸಿನ ವಿದ್ಯಾರ್ಥಿಗಳಿಗಾಗಿ ನಡೆಯುತ್ತದೆ. 45 ದೇಶಗಳ 320 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು. ಹನಿವೆಲ್ ಮತ್ತು ಯುಎಸ್‌ಎಸ್‌ಆರ್‌ಸಿ ಸಹಯೋಗದಲ್ಲಿ 2010ರಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಇಲ್ಲಿಯವರೆಗೆ 2,090 ವಿದ್ಯಾರ್ಥಿಗಳು ಈ ಅನುಭವ ಪಡೆದಿದ್ದಾರೆ.